ಮಣಿಪಾಲ, ಬೆಂಗಳೂರು, ಹುಬ್ಬಳ್ಳಿ ಮತ್ತು ಮುಂಬಯಿಯಿಂದ ಪ್ರಕಾಶಿತ Published from Manipal, Bangalore, Hubli & Mumbai

# ಉದಯವಾಣಿ

ಬೆಲೆ: ₹ 3-50
ವಿದೇಶ ಬೆಲೆ: ₹ 4-50

ಸಂಪುಟ: 44 ಸಂಚಿಕೆ: 24

UDAYAVANI – KANNADA DAILY – MANIPAL

http://www.udayavani.com

ಮಣಿಪಾಲ, ಗುರುವಾರ, ಜನವರಿ 24, 2013

## ಮಣಿಪಾಲ ಆಸ್ಪತ್ರೆಯಲ್ಲಿ ಅಪರೂಪದ ಶಸ್ತ್ರಚಿಕಿತ್ಸೆ

ಉಡುಪಿ, ಜ. 23: ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಜಟಿಲವಾದ ಹೃದಯದ ಕಿರೀಟ ಕವಾಟದ ಬದಲಿ ಜೋಡಣೆ ಮತ್ತು ಮಹಾ ಅಪಧಮನಿಯ ಕಸಿ ಜೋಡಣೆ ಶಸ್ತ್ರಚಿಕಿತ್ಸೆಯೊಂದು ನಡೆದಿದೆ.



ಡಾ। ವಾಸುದೇವ ಬಿ. ಪೈ

ಶಾರದಮ್ಮ (ಹೆಸರು ಬದಲಿಸಲಾಗಿದೆ) ಅತಿ ಕಡಿಮೆ ರಕ್ತದೊತ್ತಡ ಮತ್ತು ಎದೆ ನೋವಿನ ಕಾರಣಕ್ಕೆ ಜ.18ರಂದು ತುರ್ತು ಚಿಕಿತ್ಸಾ ವಿಭಾಗಕ್ಕೆ ದಾಖಲಾದರು. ರೋಗಿಯು 'ಎ' ಪ್ರವರ್ಗದ 'ಡಿ ಸೆಕ್ಷನ್ ಆಫ್ ಅಯೋಟಾ ವಿದ್ ರಿಗರ್ಜಿಟೋ' ರೋಗದಿಂದ ಬಳಲುತ್ತಿದ್ದಾರೆನ್ನುವುದು ತಿಳಿದುಬಂತು. ಮಹಾಅಪಧಮನಿಯು ಇಬ್ಭಾಗವಾದ ಕಾರಣ ಹೃದಯ ಕವಾಟದ ಸೋರುವಿಕೆ ಎಂದು ಅರ್ಥೈಸಬಹುದು. ಮಹಾಅಪಧಮನಿ ಕಾಯಿಲೆಯು ಹೆಚ್ಚಿನ ರಕ್ತದೊತ್ತಡದ ಮತ್ತು ಇಂತಹ ರೋಗಿಗಳಲ್ಲಿ ಮರಣದ ಪ್ರಮಾಣ ಅಧಿಕವಾಗಿರುತ್ತದೆ (ಶೇ.40ರಿಂದ 50) ಮತ್ತು ಜರೂರಾಗಿ ಶಸ್ತ್ರಚಿಕಿತ್ಸೆ ಮಾಡಿಸಬೇಕು.

ರೋಗಿಯನ್ನು ಜ.19ರಂದು ಹೃದಯ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು. ಹೃದಯದ ಕಿರೀಟ ಕವಾಟವನ್ನು ಬದಲಿಸಲಾಯಿತು. ರೋಗಗ್ರಸ್ಥ ಮಹಾಅಪಧಮನಿ ಭಾಗವನ್ನು ತುಂಡರಿಸಿ ತೆಗೆದು ಆ ಭಾಗವನ್ನು ಕಸಿ ಮೂಲಕ ಪುನಃ ಜೋಡಿಸಲಾಯಿತು. ರೋಗಿ ಚೇತರಿಸಿಕೊಳ್ಳುತ್ತಿದ್ದಾರೆ. ಇಂತಹ ಚಿಕಿತ್ಸೆ ಮಣಿಪಾಲ ಆಸ್ಪತ್ರೆಯಲ್ಲಿ ಮೊದಲ ಬಾರಿ ನಡೆದಿದೆ.

ಹೃದಯ ರೋಗ ತಜ್ಞ ಡಾ।ಟಾಮ್ ದೇವಾಸಿಯವರು ಶಸ್ತ್ರಚಿಕಿತ್ಸೆ ನಡೆಸುವಂತೆ ಸೂಚಿಸಿದಂತೆ ಇಂಗ್ಲೆಂಡ್‌ನಲ್ಲಿ ಪರಿಣತಿ ಪಡೆದ, ಎಫ್‌ಆರ್‌ಸಿಎಸ್ ಪದವಿ ಪಡೆದ ಡಾ।ವಾಸುದೇವ ಬಿ. ಪೈಯವರು ಶಸ್ತ್ರಚಿಕಿತ್ಸೆ ನಡೆಸಿದರು. ಡಾ।ಪೈ ಅವರು ಹೃದಯ ಶಸ್ತ್ರಚಿಕಿತ್ಸಾ ತಜ್ಞರಾದ ಡಾ।ಗಣೇಶ ಕಾಮತ್ ಮತ್ತು ಡಾ।ಸುಜಿತ್ ಸುವರ್ಣ, ಅರಿವಳಿಕೆ ತಜ್ಞ ಡಾ।ಸುನಿಲ್ ಸಾಗರ್, ಪರ್ಫ್ಯೂಶನಿಸ್ಟ್ ಶಿವಶಂಕರ ಪೈ ಅವರ ತಂಡದೊಂದಿಗೆ ಶಸ್ತ್ರಚಿಕಿತ್ಸೆ ನಡೆಸಿದರು.

'ಇಂತಹ ತೊಂದರೆಗಳು ಹೃದಯ ಸ್ತಂಭನ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಲ್ಲಿ ಕಂಡುಬರುವಂತೆ ಇರುವುದರಿಂದ ಪತ್ತೆ ಹಚ್ಚುವುದು ಕಠಿನ ಮತ್ತು ಬೇಗನೆ ಪತ್ತೆ ಹಚ್ಚಿದರೆ ಸಾವಿನಿಂದ ಪಾರು ಮಾಡಬಹುದಾಗಿದೆ' ಎನ್ನುತ್ತಾರೆ ಡಾ।ವಾಸುದೇವ ಬಿ. ಪೈ. 'ಸುಧಾರಿತ ಮತ್ತು ಕ್ಲಿಷ್ಟಕರ ಶಸ್ತ್ರಚಿಕಿತ್ಸೆಗಳು ಮಣಿಪಾಲ ಆಸ್ಪತ್ರೆಯಲ್ಲಿ ನಡೆಯುತ್ತಿರುವುದು ಹೆಮ್ಮೆಯ ಸಾಧನೆಯಾಗಿದೆ' ಎಂದು ಮುಖ್ಯ ವೈದ್ಯಾಧಿಕಾರಿ ಡಾ।ಎಂ.ದಯಾನಂದ ಹೇಳುತ್ತಾರೆ.